# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/84/13-14 ದಿನಾಂಕ :19/07/2016

ಉಪಸ್ಥಿತರು: ಶ್ರೀ ಲೊಕೇಶ ಪಿ. ಎನ್. ಕ.ಆ.ಸೇ

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| (1) ಶ್ರೀಮತಿ ಕೋರಿ ಸರಸ್ವತಮ್ಮ ಗಂಡ ದಿ. ಕೋರಿ ಲಿಂಗಪ್ಪ<br>(2) ಶ್ರೀ ಮುದುಕಲಪೆಂಟೆ ಕುಮಾರಸ್ವಾಮಿ ತಂದೆ ಮಹದೇವಪ್ಪ<br>(3) ಶ್ರೀ ಕೋರಿ ಚಂದ್ರಪ್ಪ ತಂದೆ ದೊಡ್ಡಪ್ಪ<br>(4) ಶ್ರೀ ಕರೆಮರ ಭರ್ಮಪ್ಪ ತಂದೆ ಈಶ್ವರಪ್ಪ<br>(5) ಶ್ರೀಮತಿ ಕೋರಿ ತಿಪ್ಪಮ್ಮ ಗಂಡ ದೇವೇಂದ್ರಪ್ಪ<br>(6) ಶ್ರೀ ಕೋರಿ ಭರ್ಮಪ್ಪ ತಂದೆ ಹರಳಪ್ಪ<br>(7) ಶ್ರೀ ಟಿ. ರುದ್ರಮುನಿ ತಂದೆ ಮಾರೆಣ್ಣ<br>(8) ಶ್ರೀ ಹರಳ ಕೊಟ್ರಪ್ಪ ತಂದೆ ಗಿಡ್ಡ ನಾಗಪ್ಪ<br>(9) ಶ್ರೀ ಜಿ. ಶಂಲಿಕಿಂಗಪ್ಪ ತಂದೆ ಪೊಂಪಣ್ಣ<br>(10) ಶ್ರಿ ಜಿ. ಎಂ. ವೀರಭದ್ರಯ್ಯ ತಂದೆ ವೀರಭದ್ರಯ್ಯ<br>(11) ಶ್ರೀ ಬಲಗೋಡು ವೀರೇಶ ತಂದೆ ವೀರಣ್ಣ<br>(12) ಶ್ರೀ ಕರೆಮರೆ ವೀರೇಶಪ್ಪ ತಂದೆ ಚನ್ನಬಸಪ್ಪ<br>(13) ಶ್ರೀಮತಿ ಎಂ ನಿರ್ಮಲಮ್ಮ ತಂದೆ ಷಡಕ್ಷರಯ್ಯ<br>(14) ಶ್ರೀ ಸಿರಿಗೇರಿ ಬಸವರಾಜ ತಂದೆ ದೊಡ್ಡಪ್ಪ<br>(15) ಶ್ರೀ ಕೋರಿ ಲಿಂಗಪ್ಪ ತಂದೆ ನಾಗಪ್ಪ<br>(16) ಶ್ರೀ ಕಡ್ಡಿಪುಡಿ ರುದ್ರಪ್ಪ ತಂದೆ ನಾಗಪ್ಪ<br>(17) ಶ್ರೀ ಐಯೋದಿ ಕೊಟ್ರಪ್ಪ ತಂದೆ ಮಲ್ಲಪ್ಪ<br>(18) ಶ್ರೀ ಕೋರಿ ಮಹದೇವಪ್ಪ ತಂದೆ ದೊಡ್ಡಪ್ಪ,<br>ವಾದಿಗಳೆಲ್ಲರೂ ತಾಳೂರು ಗ್ರಾಮ, ಸಂಡೂರು ತಾಲ್ಲೂಕು<br><br>(ಶ್ರೀ ಎಂ. ಎರ್ರಿಸ್ವಾಮಿ, ವಕೀಲರು, ಬಳ್ಳಾರಿ) | (1) ತಹಶೀಲ್ದಾರರು, ಸಂಡೂರು<br>(2) ಶ್ರೀ ಗಂಡಿ ನಾಗಪ್ಪ ತಂದೆ ಸಣ್ಣ ಗಾಂದೆಪ್ಪ<br>(3) ಶ್ರೀ ಗಂಡು ಬಸಪ್ಪ ತಂದೆ ಗಾಂದೆಪ್ಪ<br>(4) ಶ್ರೀ ಗಂಡಿ ಬಸಪ್ಪ ತಂದೆ ದೊಡ್ಡಗಾಂದೆಪ್ಪ<br>(5) ಶ್ರೀ ಕುಮಾರಪ್ಪ ತಂದೆ ಗಂಡಿ ದೊಡ್ಡಬಸಪ್ಪ<br>(6) ಶ್ರೀ ಶಂಭುನಾಥ ತಂದೆ ಗಂಡಿ ದೊಡ್ಡಪ್ಪ<br>(7) ಶ್ರೀ ದೊಡ್ಡಬಸಪ್ಪ ತಂದೆ ಗಂಡಿ ರುದ್ರಪ್ಪ<br>(8) ಶ್ರೀ ಗಂಡಿ ಬಸಪ್ಪ ತಂದೆ ಗಂಡಿ ರುದ್ರಪ್ಪ<br>ಪ್ರತಿವಾದಿ 2 ರಿಂದ 8 ರವರೆಲ್ಲರ ವಾಸ ತಾಳೂರು ಗ್ರಾಮ, ಸಂಡೂರು ತಾಲ್ಲೂಕು |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ |
|---|---|---|---|
| **ಸಂಡೂರು** | ತಾಳೂರು | 387/A | 2.50 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ತಹಶೀಲ್ದಾರರು, ಸಂಡೂರು ಇವರ ಆದೇಶ ಸಂ/ಕಂ/ಪಹಣಿ/ವಿವಾದ/172/07-08 ದಿನಾಂಕ 14/11/2008 ರ ಆದೇಶದ ವಿರುದ್ಧ ಮೇಲ್ಮನವಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿ ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿದ್ದಾರೆ. ವಿಳಂಬ ಮನ್ನಾ ಮಾಡಿ ಪ್ರಕರಣ ದಾಖಲಿಸಿ ಕೊಳ್ಳಲಾಯಿತು ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಪ್ರಕರಣವನ್ನು ದಾಖಲಿಸಿಕೊಂಡು ಉಭಯ ಪಕ್ಷಗಾರರಿಗೂ ನೋಟೀಸನ್ನು ನೀಡಿ ದಿನಾಂಕ 18/07/2014,

17/03/2015, 11/08/2015, 06/10/2015, 01/12/2015, 08/03/2016, 14/06/2016 ಹಾಗೂ 19/07/2016 ಗಳಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ವಾದಿಗಳು ಪ್ರಸ್ತಾಪಿತ ಷೆಡ್ಯೂಲನಲ್ಲಿ ತೋರಿಸಿರುವ ಜಮೀನಿಗೆ ಸಂಬಂಧಿಸಿದಂತೆ ಅವರ ಪರ ವಕೀಲರ ಮುಖಾಂತರ ಮೇಲ್ಮನವಿಯನ್ನು ಸಲ್ಲಿಸಿದ್ದು, ಪ್ರತಿವಾದಿ 1 ರವರ ಆದೇಶವನ್ನು ಪ್ರಶ್ನಿಸುತ್ತಾ, ವಾದಿಗಳು ನೊಂದಾಯಿತವಲ್ಲದ ಪತ್ರಗಳ ಮೇರೆಗೆ ಸದರಿ ಜಮೀನಿನ ಸ್ವಾಧೀನಾನುಭವವನ್ನು ಹೊಂದಿದ್ದು, ಮನೆಗಳು, ಗುಡಿಸಲುಗಳನ್ನು ನಿರ್ಮಿಸಿ ಕೊಂಡು ಸುಮಾರು 100 ವರ್ಷಗಳಿಂದ ಯಾವುದೇ ಅಡತಡೆಗಳಿಲ್ಲದೆ ಸ್ವಾಧಿನಾನುಭವ ಹೊಂದಿರುವುದಾಗಿ, ತಿಳಿಸುತ್ತಾ, ಗ್ರಾಮಪಂಚಾಯತಿಗೆ ಕಂದಾಯವನ್ನು ಪಾವತಿಸುವುತ್ತಿರುವುದಾಗಿ ತಿಳಿಸುತ್ತಾ, ಸ್ವಾಧಿನಾನುಭವದ ಮೇರೆಗೆ ಹಕ್ಕನ್ನು ಸ್ಥಿರಪಡಿಸಲು ಕೋರಿರುತ್ತಾರೆ.

ಪ್ರಕರಣದಲ್ಲಿನ ಪ್ರತಿವಾದಿಗಳಿಗೆ ನಿರಂತರವಾಗಿ ನೋಟೀಸನ್ನು ಜಾರಿ ಮಾಡಿದ್ದಾಗ್ಯೂ, ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ.

ವಾದಿಗಳು ಸಲ್ಲಿಸಿದ ಮೇಲ್ಮನವಿ ಹಾಗೂ ದಿನಾಂಕ 19/07/2016 ರಂದು ವಾದಿ ಪರ ವಕೀಲರು ಮಂಡಿಸಿದ ವಾದವನ್ನು ಆಲಿಸಲಾಗಿ, ಮತ್ತು ಪ್ರತಿವಾದಿ 1 ರವರು ಮಾಡಿದ ಆದೇಶವನ್ನು ಪರಿಶೀಲಿಸಲಾಗಿ, ಪ್ರಶ್ನಿತ ಆಸ್ತಿ ಸಂಡೂರು ತಾಲ್ಲೂಕು ತಾಳೂರು ಗ್ರಾಮದ ಸ. ನಂ. 387/A ವಿಸ್ತೀರ್ಣ 2.50 ಎಕರೆ ಇದ್ದು, ಸದರಿ ಜಮೀನು ತಾಳೂರು ಗ್ರಾಮದ ಗ್ರಾಮಠಾಣಾ ವ್ಯಾಪ್ತಿಗೆ ಒಳಪಟ್ಟಿದ್ದು, ಅಲ್ಲಿ ಜನರು ಮನೆ ಕಟ್ಟಿಕೊಂಡು ವಾಸವಿರುವುದಾಗಿ ಹಾಗೂ ಸದರಿ ಜಮೀನು ಕೃಷಿಯೇತರ ಉದ್ದೇಶಕ್ಕಾಗಿ ಬಳಸುತ್ತಿರುವ ಕುರಿತು ವಾದಿಗಳು ತಿಳಿಸಿರುವುದರಿಂದ ಹಾಗೂ ವಾದಿಗಳು ಸಲ್ಲಿಸಿರುವ ಕ್ರಯಪತ್ರಗಳು ನೊಂದಣಿಯಾಗದ ಪತ್ರಗಳಾಗಿದ್ದು, ಪ್ರಶ್ನಿತ ಆಸ್ತಿಯ ಕುರಿತಂತೆ ತಹಶೀಲ್ದಾರರು, ಸಂಡೂರು ಇವರು ದಿನಾಂಕ 14/11/2008 ರಂದು ಮಾಡಿರುವ ಆದೇಶ ಮೇಲ್ನೋಟಕ್ಕೆ ಕ್ರಮಬದ್ಧವಾಗಿರುವುದಾಗಿ ಕಂಡುಬಂದಿರುವುದರಿಂದ, ವಾದಿಯು ಸಲ್ಲಿಸಿರುವ ಮೇಲ್ಮನವಿಯನ್ನು ಈ ಹಂತದಲ್ಲಿಯೇ ವಜಾಗೊಳಿಸುವುದು ಸೂಕ್ತವೆಂದು ಮನವರಿಕೆಯಾಗಿರುವುದರಿಂದ, ಈ ಕೆಳಕಂಡ ಆದೇಶ.

:: ಆದೇಶ ::

ವಾದಿಯ ಮೇಲ್ಮನವಿಯನ್ನು ತಿರಸ್ಕರಿಸಿದೆ

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನಲೆಯಲ್ಲಿ ಸಂಡೂರು ತಾಲ್ಲೂಕಿನ ತಾಳೂರು ಗ್ರಾಮದ ಸ. ನಂ. 387/A ವಿಸ್ತೀರ್ಣ: 2.50 ಎಕರೆ ಜಮೀನಿಗೆ ಸಂಬಂಧಿಸಿದಂತೆ ತಹಶೀಲ್ದಾರರು, ಸಂಡೂರು ಇವರ ದಿನಾಂಕ 14/11/2008 ರ ಆದೇಶವನ್ನು ಎತ್ತಿಹಿಡಿದು, ವಾದಿಗಳು ಸಲ್ಲಿಸಿರುವ ಮೇಲ್ಮನವಿಯನ್ನು ವಜಾಗೊಳಿಸಿ ಆದೇಶಿಸಿದೆ.

ಈ ಆದೇಶವನ್ನು ದಿನಾಂಕ 19/07/2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಬಳ್ಳಾರಿ.

ಗೆ,
ತಹಶೀಲ್ದಾರರು, ಸಂಡೂರು
ವಾದಿ ಮತ್ತು ಪ್ರತಿವಾದಿಗಳು